DEMAND CAUSED TO SHARAVATHY PROJECT

310. Sri M. S. KRISHNAN (Malleswaram).—

Will the Minister for Public Works and Electricity be pleased to state:—

(*a*) the type, extent and the nature of damages caused to the Sharavathy Project (M.G. Hydro Electric Project) as assessed upto date;

(*b*) the reasons for the damage as revealed in the investigations;

(*c*) the steps they have taken in order to repair the damage caused and in what period the damages would be repaired;

(*d*) whether the Government has decided to institute a Judicial probe into the affairs of the Sharavathy Project?

Sri H. M. CHANNABASAPPA (Minister for Public Works and Electricity).—

(*a*) The extent and nature of damages observed in the Water Conductor System of the Sharavathy Hydro-Electric Project have been indicated in the Statement made on 26th June 1972. Further investigations are still in progress.

(*b*) Can be assessed only after completion of the investigations.

(*c*) (i) The repairs to the Vodenbyle tunnel No. 1 were taken up on 19th August 1972 and completed on 3rd September 1972 and the tunnel was put back into operation from 4th September 1972.

(ii) The Permanent repairs to the Sluices, the Power Channel and the Talakalale Dam will be undertaken in the light of the advice sought from the Technical Experts.

(*d*) The entire matter is under consideration.

ಶ್ರೀ ಎಂ. ಎಸ್. ಕೃಷ್ಣನ್.—ಸ್ಪಾಪಿ, ತಾವು (ಎ) ಗೆ ಉತ್ತರವಾಗಿ the extent and nature of damages observed in the Water Conductor System of the Sharavathy Hydro-Electric Project have been indicated in the Statement placed before the Legislature on 26th June 1972 ಎಂದು ಹೇಳಿದ್ದೀರಾ. ಮತ್ತು ಇದೇ ಪ್ರಶ್ನೆಯ (ಡಿ) ಗೆ ಉತ್ತರವಾಗಿ The entire matter is under consideration ಎಂದು ಹೇಳಿದ್ದೀರಾ. ನೀವು ಕೊಟ್ಟಿರುವ ವರದಿಯನ್ನು ಓದಿದರೆ ಅದು ಈ ರೀತಿ ಇದೆ:— The Government was apprised of the magnitude of the seriousness of the damages and repairs were ordered. Nothing more was done to probe into the matter ಎಂದು ಇದೆ. ಇದು ಗಂಭೀರವಾದ ಪ್ರಶ್ನೆ. ನನ್ನ ಪ್ರಶ್ನೆ ಏನೆಂದರೆ ಈಗ ಕೊಟ್ಟಿರುವ ಪಟ್ಟಿಯಲ್ಲಿ ಕಂಟ್ರಾಕ್ಟರ್ಸ್ ಕೆಲವರು ಇದ್ದಾರೆ, ಇಂಜಿನಿಯರ್ಸ್ ಕೆಲವರು ಇದ್ದಾರೆ. ಸರ್ಕಾರದವರು ಈ ಬಗ್ಗೆ ಏನೂ ಮಾಡಿಲಲ್ಲ ಎಂದರೆ ಇದಕ್ಕೆ ತಾವು ಹೊಣೆಗಾರಿಕೆ ಹೊತ್ತು ಮಾಡ

ಲ್ಲ ಎನ್ನುವ ಅರ್ಥ ಬರುತ್ತದೆ. ಮತ್ತು The entire matter is under consideration ಎಂದುಹೇಳಿದ್ದೀರಾ. ಆದುದರಿಂದ ಇದನ್ನು ಜುಡಿಷಿಯಲ್ ಪ್ರೊಬ್ ಮಾಡುವುದಕ್ಕೆ ಒಪ್ಪಿಕೊಳ್ಳುವುದು ನ್ಯಾಯ ಉಂಟೇ ಅಲ್ಲವೇ ?

† ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ನ್ಯಾಯ ಉಂಟೇ ಅಲ್ಲವೇ ಎಂದು ಕೇಳಿದ್ದಾರೆ. ಅದಕ್ಕೆ ನಾನು ಹೇಳುವುದು ಇಡೀ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆಯೂ ಕೂಡ ಈ ಬಗ್ಗೆ ಕೊಶ್ಚನ್ ಮಾಡಿದಾಗ ತಾವು ಹೇಳಿದ್ದೀರಾ. ಅದನ್ನೆಲ್ಲಾ ನೋಡಿ ಬಟ್ಟು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಆದುದರಿಂದ ಇದರ ಬಗ್ಗೆ ಯಾವಾಗ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಸರ್ಕಾರದವರು ಇದರ ಬಗ್ಗೆ ಅವಶ್ಯವಾದಂಥ ಮಾಹಿತಿಗಳು ಸಂಗ್ರಹಣೆ ಆದ ಕೂಡಲೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎ. ಶೀಲನಾಳಿ ಚಂದ್ರಶೇಖರ್.—ಹಿಂದೆ ಶರಾವತಿ ಹಗರಣದ ಬಗ್ಗೆ ಈ ಸಭೆಯಲ್ಲಿ ಪ್ರಶ್ನೆ ಮಾಡಿದಾಗ ಕೆಲವು ಕಂಟ್ರಾಕ್ಟರ್‌ಗಳ ಹೆಸರಗಳನ್ನೂ ಹೇಳಿದ್ದೀರಿ, ಕೆಲವು ಇಂಜನಿಯರ್‌ಗಳ ಹೆಸರಗಳನ್ನೂ ಹೇಳಿದ್ದೀರಿ. ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇಡೀ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳಿರುವಾಗ ತಾವು ಹೇಳಿದ ಎಲ್ಲಾ ವಿಷಯಗಳೂ ಒಳಗೊಂಡಿರುತ್ತೆ. ಹೆಚ್ಚು ವ್ಯಾಖ್ಯಾನ ಬೇಕಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಈ ಪ್ರಶ್ನೆಯಲ್ಲಿ ಪೊಡನೆಬ್ಬಿಲ ಸುರಂಗ ಮಾರ್ಗದ ದುರಸ್ತಿ ಕಾರ್ಯವನ್ನು 19-8-1972 ರಂದು ಕೈಕೊಂಡು 3-9-1972 ರಂದು ಪೂರ್ತಿಗೊಳಿಸಲಾಯಿತು ಎಂದು ಹೇಳಿದ್ದೀರಿ. ಈ ದುರಸ್ತಿ ಕಾರ್ಯಕ್ಕೆ ಎಷ್ಟು ಮೇಟೀರಿಯಲ್ಸ್ ಬಂದಿವೆ, ಎಷ್ಟು ಖರ್ಚಾಗಿದೆ, ಅದಕ್ಕೆ ತಗಲಿದ ಪೊತ್ತವೆಷ್ಟು ಹೇಳುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಗದಾಗಿ ಖರ್ಚಾಗಿರತಕ್ಕಂಥಾದ್ದು 1 ಲಕ್ಷ 50 ಸಾವಿರ ರೂಪಾಯಿ ಮತ್ತು ಮೆಟೀರಿಯಲ್ಸ್‌ಗೆ 72 ಸಾವಿರ ರೂಪಾಯಿ ಆಗಿದೆ. ಒಟ್ಟು ಪೊತ್ತ 2 ಲಕ್ಷ 22 ಸಾವಿರ ರೂಪಾಯಿ.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಶ್ನೆ ಏನೆಂದರೆ ಇದನ್ನು ನ್ಯಾಯಾಂಗ ವಿಚಾರಣೆ ಮಾಡಿಸುವುದಕ್ಕೆ ಸಿದ್ಧವಾಗಿದ್ದೀರಾ ಎಂದು ಇವಕ್ಕೆ ಬೇಕಾದಂಥ ಮಾಹಿತಿಗಳನ್ನು ಸಂಗ್ರಹಣೆ ಮಾಡುವುದು ಬೇರೆ ವಿಷಯ. ಒಟ್ಟಿನಲ್ಲಿ ಇದನ್ನು ಜುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದನ್ನು ನ್ಯಾಯಾಂಗ ವಿಚಾರಣೆ ಮಾಡಬೇಕು ಎಂದು ಈಗ ಅವಕ್ಕೆ ಒಪ್ಪಿದರೂ ಕೂಡ ಅದಕ್ಕೆ ಬೇಕಾದ ಮಾಹಿತಿಗಳನ್ನು ಸಂಗ್ರಹಣೆ ಮಾಡಬೇಕಾಗುತ್ತದೆ. ಅದರಲ್ಲಿ ಯಾವುದಾದರೂ ಒಂದು ಮಾಹಿತಿ ಇಲ್ಲದಿದ್ದರೂ ಕೂಡ ಅನುಮಾನಕ್ಕೆ ಸಂಶಯ ಬರುತ್ತದೆ. ಆದುದರಿಂದ ಅವಶ್ಯಕವಾದ ಎಲ್ಲಾ ಮಾಹಿತಿಗಳನ್ನು ಸಂಗ್ರಹಣೆ ಮಾಡುವುದಕ್ಕೆ ಕಾಲಾವಕಾಶ ಬೇಕಾಗುತ್ತದೆಯೇ ವಿನಃ ಮತ್ತೇನೂ ಇಲ್ಲ. ಇದರ ಬಗ್ಗೆ ತಾವು ಅನೇಕ ಬೇಳೆ ಹೇಳಿದ್ದೀರಿ. ಇದರ ಬಗ್ಗೆ ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಸರ್ಕಾರ ಸಿದ್ಧವಾಗಿದೆಯೇ ಎಂದು ನೇರವಾದ ಉತ್ತರ ಕೊಡುತ್ತೀರಾ ?

Sri H. M. CHANNABASAPPA.—I have already answered the question.

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ಅವಶ್ಯಕವಾದ ವಿವರಗಳನ್ನು ಸಂಗ್ರಹಣೆ ಮಾಡಿದ ಮೇಲೆ ನ್ಯಾಯಾಂಗ ವಿಚಾರಣೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೀರಾ. ಆ ಎಲ್ಲಾ ವಿವರಗಳನ್ನೂ ಸಂಗ್ರಹಣ ಮಾಡುವುದಕ್ಕೆ ಕಾಲ ಮಿತಿ ಏನಾದರೂ ಹಾಕಿದ್ದೀರಾ ? ತಾವು ಅಧಿಕಾರಕ್ಕೆ ಬಂದು 9 ತಿಂಗಳು ಆಯಿತು. ಇದಕ್ಕೆ ಕಾಲ ಮಿತಿ ಹಾಕಿದ್ದರೆ ದಯಮಾಡಿ ತಿಳಿಸಿ. ಈ ವಿವರಗಳನ್ನು ಸಂಗ್ರಹಣೆ ಮಾಡಿದ ಮೇಲೆ ಜುಡಿಷಿಯರ್ ಪ್ರೋಬ್ ಮಾಡುವುದಕ್ಕೆ ನಿರ್ಣಯ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಇದರ ಹಿನ್ನೆಲೆ ಕೆಲವರಿಗೆ ಗೊತ್ತಿಲ್ಲ. ಮಾನ್ಯ ಲೀಡರ್‌ರವರಿಗೆ ಗೊತ್ತು. ಈ ಶರಾವತಿ ಕೆಲಸಕಾರ್ಯಗಳು ನಡೆಯುವ ಕಾಲದಲ್ಲಿ ಹೆಚ್. ಇ. ಸಿ. ಪಿ. ಬೋರ್ಡ್ ಇತ್ತು. ಅದರ ವಿವರಣೆ ನೋಡಬೇಕು ಕೆಲವು ಮತ್ತೆ ಕಾಲದ ನಂತರ ಹೆಚ್. ಇ. ಸಿ. ಪಿ. ವಜಾ ಆಯಿತು. ಆದಾದ ಮೇಲೆ ಡಬ್ಲ್ಯು. ಆರ್. ಡಿ. ಓ. ಆಯಿತು. ಆವಾಗ ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಸರ್ಕಾರಕ್ಕೆ ಬಂದಿವೆಯೇ ಡಬ್ಲ್ಯು. ಆರ್. ಡಿ. ಓ. ಗೆ ಹೋದವೇ ಎನ್ನುವುದನ್ನು ನೋಡಬೇಕು. ಮತ್ತು ಕೆಲವು ಕಾಲದ ಮೇಲೆ ಎಂ. ಪಿ. ಸಿ. ಆಗಿ ಹೋಯಿತು. ಈಗ ಶರಾವತಿಗೆ ಸಂಬಂಧಪಟ್ಟ ಕಾಗದ ಪತ್ರಗಳು ಅಲ್ಲಿಗೆ ಹೋಗಿವೆ ಅದನ್ನು ನೋಡಬೇಕು. ಈ ಕಾಗದ ಪತ್ರಗಳು ಎಲ್ಲೆಲ್ಲಿಗೆ ಹೋಯಿತು ಎನ್ನುವುದನ್ನು ನೋಡಬೇಕು. ಇವೆಲ್ಲಾ ವಿಷಯಗಳನ್ನು ಸಂಗ್ರಹಣೆ ಮಾಡಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಆದುದರಿಂದ ಅದಕ್ಕೆ ಅವಕಾಶ ಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್ —(ಎ) ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಕೊನೆಯಲ್ಲಿ ತನಿಖೆಗಳನ್ನು ಇನ್ನೂ ಮುಂದುವರೆಸಲಾಗುತ್ತಿದೆ ಎಂದಿದೆ. ಯಾವ ಯಾವ ಲೈನ್ ಮೇಲೆ ಎಷ್ಟೆಷ್ಟು ಪ್ರೋಗ್ರೆಸ್ ಆಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಉತ್ತರದಲ್ಲೇ ಕೊಟ್ಟಿದೆ. ವರದಿ ನೋಡಿದರೆ ಗೊತ್ತಾಗುವುದು. ತಲೆಕಳಲೆ ಡ್ಯಾಂ, ಒಡೇನ್ ಬೈಲ್ ಚಾನಲ್ ಇವುಗಳು ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಪ್ರತಿಯೊಂದು ಪರಿಶೀಲನೆಯಾಗ ಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಹಿಂದಿನ ವರದಿ ಪ್ರಕಾರ ಡ್ಯಾಂನಲ್ಲಿ ಲೀಕೇಜ್ ಆಗುತ್ತಿದೆ ಎಂದು ಗೊತಾಗಿದ್ದುದು ನಿಂತಿದೆಯೇ? ಕೆಲವು ಕಡೆ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿದುಬಂದಿದೆ. ಡ್ಯಾಂನಲ್ಲಿ ಲೀಕ್ ಆಗುವುದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ತಿಳಿದುಬಂದಿದೆ. ಜಾಸ್ತಿ ಲೀಕ್ ಆಗುತ್ತಿದೆಯೇ? ಅದನ್ನು ನಿಲ್ಲಿಸಲು ಸಾಧ್ಯವಿಲ್ಲವೇ? ಇದರ ಬಗ್ಗೆ ಏನಾದರೂ ಕೇಳಲು ಸಾಧ್ಯವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಪೆಟಿಂಗನ್ನು ಲೀಕೇಜ್ ಎಂದು ಹೇಳಬಹುದೆಂದು ಕಾಣುವುದು. ಈ ಎರಡಕ್ಕೂ ವ್ಯತ್ಯಾಸವಿದೆ. ಸ್ಪೆಟಿಂಗ್ ಸ್ವಲ್ಪ ಪ್ರಮಾಣದಲ್ಲಿದೆ. ಸ್ಪೆಟಿಂಗ್ ಆಗಿ ಬಂದ ನೀರು ಏನಿದೆ ಅದರ ಹನಿ ಕೂಡಿ ಹರಿಯುವುದು, ಅದು ಲೀಕೇಜ್ ಎಂದು ಹೇಳುತ್ತಿದಾರೆಂದು ಕಾಣುತ್ತದೆ. ನೀರು ಸ್ವಚ್ಛವಾಗಿ ಬಂದರೆ ಅದರಿಂದ ಡ್ಯಾಂಗೆ ಯಾವ ವಿಧವಾದ ಅಪ್ಪ ಘಾತವೂ ಇಲ್ಲ ಎಂದು ಕೇಳುವವರೂ ಇದ್ದಾರೆ, ಸ್ವಚ್ಛವಾಗಿ ಬಾರದಿದ್ದರೆ, ಕಸ, ಮಾರ್ಟರ್ ಬಂದರೆ ಡ್ಯಾಮೇಜ್ ಆಗಿದೆ ಎಂದು ಭಾವಿಸಬೇಕೆಂದು ತಜ್ಞರು ಕೆಲವರು ಹೇಳುವರು. ಇದಕ್ಕಾಗಿ ಎಷ್ಟು ಪ್ರಮಾಣದಲ್ಲಿ ಕನಕಡ್ಡಿ ಬರುವುದು ಎಂಬುದನ್ನು ಕೂಡ ನೋಡಲು ಕೆಲವುಕಾಲ ಆ ನೀರನ್ನು ಕ್ಲೋರಿನ್ ಪರ್ಸಂಟೇಜ್ ನೋಡುವ ಕಾರ್ಯ ಕ್ರಮವಿದೆ. ಈಗ ತಿಳಿದಮಟ್ಟಿಗೆ ಸ್ಪೆಟಿಂಗ್‌ನಲ್ಲಿ ನೀರು ಸ್ವಚ್ಛವಾಗಿ ಬರುತ್ತಿದೆ ಎಂದು ವರದಿಯಾಗಿದೆ. ಇದನ್ನು ಸ್ವಲ್ಪಮಟ್ಟಿಗೆ ಪರಿಶೀಲಿಸಲು ಕಾಲ ಬೇಕು.

LIFT IRRIGATION IN BIDAR DISTRICT

354. Sri V. N. PATIL (Humnabad).—

Will the Minister for Public Works and Electricity be pleased to state:—

(*a*) whether there is proposal before the Government to take up Lift Irrigation Scheme in Bidar district;

(*b*) if so, the places which have been surveyed and the schemes of which plans and estimates have been approved by the Government for Lift Irrigation (Taluk-wise figures of such schemes may please be furnished);